# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ ಮಾಘ ಜನವರಿ ೨೦೧೦ ಸಂಪುಟ-೪ ಸಂಚಿಕೆ-೧


ಗುರುವಾಣಿ

## ಅರ್ಥಪೂರ್ಣ ವೃತ್ತ ಪರಿಪೂರ್ಣ



೧೭ ಜನವರಿ ೨೦೧೦ರಂದು ನಾಗಪುರದಲ್ಲಿ ಸಂಪನ್ನಗೊಂಡ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ್ವರ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳ ಮಂಗಲ ಸಂದೇಶದ ಪೂರ್ಣಪಾಠ

**ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಮಂಗಲ ಸಮಾರೋಪದೊಡನೆ ವೃತ್ತ ಪರಿ–ಪೂರ್ಣವಾಯಿತು.**

ನಾಗಪುರ, ಅಸಂಖ್ಯ ಸಂತರನ್ನು, ದೇಶ ಭಕ್ತರನ್ನು ನೀಡಿದ ಭಾರತಮಾತೆಯ ನಾಭಿ ಪ್ರದೇಶ. ತಾಯಿಗೂ, ಮಗುವಿಗೂ ಇರುವ ಏಕೈಕ ಕೊಂಡಿ ಎಂದರೆ ನಾಭಿ. ಭಾರತ ಮಾತೆಯ ಅರ್ಥಾತ್ ಗೋಮಾತೆಯ ನಾಭಿ ಬಿಂದು ನಾಗಪುರ. ಸೃಷ್ಟಿಕರ್ತ ಬ್ರಹ್ಮನೂ ವಿಷ್ಣುವಿನ ನಾಭಿ ಕಮಲದಿಂದ ಬಂದ, ಹಾಗಾಗಿ ನಾಭಿಯ ಮಹತ್ವ ಅತಿಶಯ. ಹಾಗಾಗಿ ನಾಗಪುರ ಪರಮ ಪವಿತ್ರವಾಗದೆ.

ಯಾತ್ರೆಯ ಶುಭ ಬೀಜಾಂಕುರ 2 ವರ್ಷಗಳ ಹಿಂದೆ ನಾಗಪುರದಲ್ಲಿ ಸಂಘದ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ನಡೆಯಿತು. ಇಂದು ಯಾತ್ರೆಯ ಸಮಾಪನದೊಡನೆ ವೃತ್ತ ಪರಿಪೂರ್ಣವಾಯಿತು. ಗೋವಿನ ಬಗೆಗಿನ ನಮ್ಮ ಭಾವನೆಗಳಿಗೆ ಮಹಾರಾಷ್ಟ್ರದಲ್ಲಿ ನೋಡಿದ ಒಂದು ಮಹಾನಂದಿಯೇ ಕಾರಣ. ಕಲಿಯುಗದಲ್ಲಿ ಶ್ರೀ ಕೃಷ್ಣ ಸಂಘ 'ರೂಪದಲ್ಲಿ ಅವತರಣಗೊಳ್ಳುತ್ತಾನೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಶ್ರೀ ಕೃಷ್ಣನ ಸ್ವರೂಪವೆಂದು ಭಾವಿಸುತ್ತೇವೆ. ಸಂಘ, ಧರ್ಮ ರಕ್ಷಣೆಗಾಗಿ ಪುಣ್ಯಭೂಮಿ ನಾಗಪುರದಲ್ಲಿ ಹುಟ್ಟಿಕೊಂಡಿದೆ.

ಗೋವಂಶ ನಶಿಸುತ್ತಿದೆ. ಈಗ ರಕ್ಷಿಸದಿದ್ದರೆ ಮುಂದೆಂದೂ ಸಾಧ್ಯವಿಲ್ಲ. ಯಾತ್ರೆ ನವದಿಶೆಯನ್ನು ಸೂಚಿಸುತ್ತಿದೆ. ಗೋಮಾತೆ – ರಾಮ, ಕೃಷ್ಣರಂತೆ, ಸಂಕಟವನ್ನು ಧರ್ಮ ಸ್ಥಾಪನೆಗಾಗಿ ಸಹಿಸುತ್ತಿದ್ದಾಳೋ ಎಂದೆನಿಸುತ್ತಿದೆ. ಗೋರಕ್ಷಣೆಯಲ್ಲಿ ದೇಶ ರಕ್ಷಣೆ ಇದೆ. ವಿಶಾಲ ಆಂದೋಲನದ ಬೀಜಾಂಕುರ ಈ ಯಾತ್ರೆಯಾಗಿದೆ. ಭಾರತದ ಪ್ರಾಣವಾದ ಗೋಮಾತೆಯ ಪ್ರಾಣವನ್ನುಳಿಸಲು ನಮ್ಮ ಪ್ರಾಣವನ್ನು ಸಮರ್ಪಣೆ ಮಾಡುವ ಪಣ ತೊಡುತ್ತೇವೆ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

**ಹೂರಣ**


**ಗುರುವಾಣಿ**
**ಪ್ರಶ್ನೋತ್ತರ**
**ಮಾಸದ ಗೋವು: ನಿಮರಿ**
**ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಭವ್ಯ ಸಮಾರೋಪ**
**ದನಗಳ ಸೌಂದರ್ಯ ಸ್ಪರ್ಧೆ**



ಪ್ರಕಾಶನ: IT4COW ಸಂಘಟನೆ groups.yahoo.com/group/IT4COW

ಅಂತರಜಾಲ ತಾಣ: vishwagou.org, gougram.org

ಸಂಪರ್ಕ: govishva@gmail.com






ಜನವರಿ 17, 2010ರಂದು ನಾಗಪುರದಲ್ಲಿ ಜರುಗಿದ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಭವ್ಯ ಸಮಾರೋಪ ಸಭೆ

## ಪ್ರಶ್ನೋತ್ತರ

ಪ್ರ: ಅಮೃತಮಹಲ್ ತಳಿಯ ಇಂದಿನ ಪರಿಸ್ಥಿತಿ ಏನು ?

ಮೈಸೂರು ಅರಸರು ಅಮೃತಮಹಲ್ ತಳಿಯ ಅಭಿವೃದ್ಧಿಗಾಗಿ ವಿಸ್ತಾರವಾದ ಜಮೀನನ್ನು ಒದಗಿಸಿದ್ದರು. ಇವಕ್ಕೆ ಅಮೃತಮಹಲ್ ಕಾವಲ್‌ಗಳು ಎಂದೇ ಹೆಸರು. 17ನೇ ಶತಮಾನದಲ್ಲಿ 1,72,800 ಹೆಕ್ಟೇರ್‌ಗಳಷ್ಟು ಕಾವಲ್ ಭೂಮಿ ಮತ್ತು 60,000 ಅಮೃತ ಮಹಲ್ ಜಾನುವಾರುಗಳು ಇದ್ದವು. ಈಗ 21,700 ಹೆಕ್ಟೇರ್ ಕಾವಲ್ ಭೂಮಿ ಹಾಗು 1500 ಜಾನುವಾರುಗಳು ಮಾತ್ರ ಇವೆ. ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದಲ್ಲಿ ಅಮೃತಮಹಲ್ ತಳಿ ಸಂವರ್ಧನ ಕೇಂದ್ರ ಹಾಗೂ ಹೀಗೂ ಕೆಲಸ ಮಾಡುತ್ತಿದೆ. ಇತರ ದೇಸೀ ಗೋತಳಿಗಳಂತೆ ಅಮೃತಮಹಲ್ ತಳಿಗಳೂ ಅವನತಿಯ ಹಾದಿಯಲ್ಲಿವೆ.

ಪ್ರಶ್ನೆ: ಮಲೆನಾಡು ಗಿಡ್ಡ ಜಾತಿ ಗೋವುಗಳು ಎಲ್ಲಿ ಕಂಡು ಬರುತ್ತವೆ ?

ಮಳೆ ಅಧಿಕವಾಗಿ ಬೀಳುವ ದಟ್ಟ ಅರಣ್ಯಗಳು ಹಾಗೂ ಬೆಟ್ಟಗುಡ್ಡ ಗಳಿಂದ ಕೂಡಿದ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ (ಉಡುಪಿ ಜಿಲ್ಲೆ ಸೇರಿ) ಜಿಲ್ಲೆಗಳಲ್ಲಿ ಮಾತ್ರ ಮಲೆನಾಡ ಗಿಡ್ಡ ಜಾತಿಯ ದನಗಳು ಕಂಡುಬರುತ್ತವೆ. ಇವು ಯಾವುದೇ ನಿರ್ದಿಷ್ಟ ತಳಿಗೆ ಸೇರಿದವಲ್ಲ. ವಿಶೇಷವಾಗಿ ಇವು ಗಿಡ್ಡ ಗಾತ್ರದವು. ಕಪ್ಪು ಹಾಗೂ ಕಂದು ಬಣ್ಣದಲ್ಲಿರುತ್ತವೆ. ಸಾಮಾನ್ಯವಾಗಿ 3 ರಿಂದ 5 ಲೀಟರ್ ಹಾಲು ಕೊಡುತ್ತವೆ. ಕಾಲುಗಳು ಧೃಡವಾಗಿದ್ದು ಎತ್ತರದ ಬೆಟ್ಟಗುಡ್ಡಗಳನ್ನು ಸುಲಭವಾಗಿ ಏರಿಳಿಯುತ್ತವೆ. ಅಲ್ಲೇ ಮೇಯುತ್ತವೆ. ಮಲೆನಾಡು ಗಿಡ್ಡದ ವಿಶೇಷವೆಂದರೆ ಅವುಗಳ ಅಪಾರ ರೋಗ ನಿರೋಧಕ ಶಕ್ತಿ ಸಾಮಾನ್ಯವಾಗಿ ಹಸುಗಳನ್ನು ಕಾಡುವ ಕಾಲು ಬಾಯಿ ರೋಗ. ರಿಂಡರ್ ಪೆಸ್ಟ್ ಮುಂತಾದ ರೋಗಗಳು ಇವುಗಳಿಗೆ ಬರುವುದು ಬಲು ಅಪರೂಪ.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

## ಸಂಪಾದಕರ ನುಡಿ


ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 28ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com


ಮಾಸದ ಗೋವು

# ನಿಮರಿ

**ಮಧ್ಯ ಪ್ರದೇಶದಲ್ಲಿ ಗೀರ್ ಹಾಗು ಖಿಲಾರಿ ತಳಿಯ ಸಂಯೋಗದಿಂದ ಬಂದ ಒಂದು ಉತ್ತಮ ತಳಿ ನಿಮರಿ ಈ ತಿಂಗಳ ಮಾಸದ ಗೋವು. ಉತ್ತಮ ಕೆಲಸಗಾರ ತಳಿ ಇದು. ಕೆಲವೊಮ್ಮೆ ಹೆಚ್ಚು ಹಾಲು ನೀಡುವುದೂ ಉಂಟು.**

ನಿಮರಿ ಅಥವಾ ನಿಮಾರಿ ತಳಿಯ ಗೋವು ಗೀರ್ ಹಾಗು ಖಿಲಾರಿ ತಳಿಯ ಸಂಯೋಗದಿಂದ ಬಂದ ಒಂದು ಉತ್ತಮ ತಳಿ. ಇದರ ದೊಡ್ಡ ದೇಹ, ಉಬ್ಬು ಹಣೆ ಗೀರ್ ತಳಿಯದಾದರೆ ಖಿಲಾರಿಯ ದೃಡತೆ, ಚುರುಕು, ಸಿಡುಕು ಸ್ವಭಾವಗಳು ಬಂದಿದ್ದು ಖಿಲಾರಿಯಿಂದ.





ನಿಮರಿಯ ಮೂಲ ಮಧ್ಯಪ್ರದೇಶದ ಕರ್ಗಾಂವ್ ಮತ್ತು ಖಾಂಡ್ವ ಪರ್ದೇಶ. ನಂತರ ಇದರ ಪ್ರಸಿದ್ಧಿ ಹೆಚ್ಚತೊಡಗಿ ದೊಡ್ಡ ಸಂಖ್ಯೆಯಲ್ಲಿ ಮಹರಾಷ್ಟ್ರ ಹಾಗೆಯೆ ಭಾರತದ ಉಳಿದ ಪ್ರದೇಶಗಳ ಕೊಟ್ಟಿಗೆಗಳನ್ನು ತುಂಬತೊಡಗಿತು. ಇಂದು ಭಾರತದ ಅನೇಕ ರಾಜ್ಯಗಳಲ್ಲಿ ಇದನ್ನು ಕಾಣಬಹುದು.

ನಿಮರಿ ಅತ್ಯುತ್ತಮ ಕೆಲಸಗಾರ ತಳಿ. ಅಪರೂಪಕ್ಕೆ ಕೆಲವು ಹಸುಗಳು ಹೆಚ್ಚು ಹಾಲು ನೀಡುವುದಿದೆಯಾದರೂ ನಿಮರಿಯ ಮುಖ್ಯ ಉಪಯೋಗವಿರುವುದು ಉಳುಮೆಗೇ.

ನಿಮರಿಯು ತಳಿ ಸದೃಡ, ಸುಂದರ ಹಾಗು ಗಂಭೀರ;ಕೆಲವೊಮ್ಮೆ ನೊಡುವವರಿಗೆ ಒಂದಿಷ್ಟು ಭಯ ಹುಟ್ಟಿಸುವ ಹಾಗೆ. ಸಾಮನ್ಯವಾಗಿ ಇವು ಕೆಂಪು, ಬಿಳಿಪಟ್ಟೆಗಳಿಂದ ಅಲಂಕೃತ. ಇವುಗಳದ್ದು ಉದ್ದ ಮುಖ, ಉಬ್ಬಿದ ಹಣೆ, ಎತ್ತರವಾದ ಡುಬ್ಬ, ನೇರ ನಿಡಿದಾದ ಕಾಲುಗಳು, ಉದ್ದವಾಗಿ ನೆಲತಾಕುವಂತೆ ಬಾಲ.

**– ಮಧುಕೇಶ ದೊಡ್ಡೇರಿ**



ನಿಮಾರಿ, ಮಧ್ಯಪ್ರದೇಶ

**ಮೂಲ : ನಿಮರಿ ಪ್ರದೇಶ – ನರ್ಮದಾ ಕಣಿವೆ – ಮಧ್ಯಪ್ರದೇಶ**

**ವಿಭಾಗ : ಕೆಲಸಗಾರ ತಳಿ.**

**ಗಿರ್ ಹಾಗೂ ಖಿಲಾರಿ ತಳಿಯಿಂದ ಬೆಳವಣಿಗೆಯಾದವುಗಳು.**

**ಬಣ್ಣ : ಕೆಂಪು ಬಣ್ಣದಲ್ಲಿ ಅಗಲವಾದ ಬಿಳಿ ಪಟ್ಟೆಗಳು.**

**ಕೊಂಬು : ಹಿಂದಕ್ಕೆ ಬಾಗಿರುತ್ತದೆ. ತಾಮ್ರದ ಬಣ್ಣವಿರುತ್ತದೆ.**

**ಮೂತಿ : ತಾಮ್ರದ ಬಣ್ಣ ಅಥವಾ ಕೆಂಪುಬಣ್ಣ**

**ಬಾಲ : ನೀಳವಾಗಿ ತುದಿ ಕಪ್ಪು**

# ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಭವ್ಯ ಸಮಾರೋಪ

**ನಾಗಪುರ, ಜ.17** – ಇಂದು ಯಾತ್ರೆಯ ಸಮಾರೋಪ ದಿವಸ. ಇಡೀ ಯಾತ್ರೆಯ ಮಂಗಲ ಗೀತೆಯನ್ನು ಹಾಡುವ ದಿನ.

ಇಂದು ಬೆಳಗ್ಗೆ ಯಾತ್ರಾ ಪ್ರಮುಖರು ಅಂಬೇಡ್ಕರ್ ದೀಕ್ಷಾ ಸ್ಥಳಕ್ಕೆ ತೆರಳಿ ಮಾಲಾರ್ಪಣೆ ಮಾಡಿ ತಮ್ಮ ಗೌರವ–ಭಕ್ತಿ ಸಮರ್ಪಣೆ ಮಾಡಿದರು.

ಸಂಜೆಯ ಸಮಾರೋಪ ಸರಿಯಾಗಿ 4:30ಕ್ಕೆ ಪ್ರಾರಂಭವಾಯಿತು. ಸಂತ–ಮಹಂತರನ್ನು ಭಾವಪೂರ್ಣವಾಗಿ ವೇದಿಕೆಗೆ ಕರೆತರಲಾಯಿತು. ವೇದಿಕೆಯು ಅತ್ಯಂತ ಭವ್ಯ–ಅರ್ಥಪೂರ್ಣವಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಂಡ್ಯದ ಶ್ರೀ ಬಸಪ್ಪ ಸ್ವಾಮಿಗಳು (ನಂದಿ ಸ್ವಾಮೀಜಿ) ವಹಿಸಿದ್ದರು.



ಜೈನಮುನಿ ಪೂ. ಪವಿತ್ರ ಸಾಗರ ಜೀ ಮಹಾರಾಜ್ ಅವರು ಜೈನಧರ್ಮದಲ್ಲಿ ಗೋವಿಗೆ ಅತ್ಯಂತ ಮಹತ್ವದ ಸ್ಥಾನವಿದೆ ಎಂದರು. ಗೋವು ರಾಷ್ಟ್ರೀಯ ಪ್ರಾಣಿಯಾಗಬೇಕು ಮತ್ತು ರಾಷ್ಟ್ರೀಯ ಶತ್ರುಗಳಾದ ಟ್ರಾಕ್ಟರ್, ರಾಸಾಯನಿಕ ಗೊಬ್ಬರ, ಕೀಟನಾಶಕಗಳು ಮೊದಲಿಗೆ ನಿರ್ಮೂಲವಾಗಬೇಕು ಎಂದರು.



ಯಾತ್ರೆಯ ಪ್ರವರ್ತಕರಲ್ಲಿ ಪ್ರಮುಖರಾದ ಬಾಬಾ ರಾಮದೇವ ವಿಶೇಷವಾಗಿ ಈ ಸಭೆಗೆ ಆಗಮಿಸಿದ್ದರು. ತಮ್ಮ ಪ್ರಖರ ನುಡಿಗಳಲ್ಲಿ ಅವರು ಗೋ ರಕ್ಷಣೆ ಎಲ್ಲರ ಕರ್ತವ್ಯವೆಂದರು. ಇಂದು ಜನರು ವಿವಿಧ ಧರ್ಮಾನುಯಾಯಿಗಳಾಗಿರಬಹುದು. ಆದರೆ ನೂರಾರು ವರ್ಷಗಳ ಹಿಂದೆ ಅವರೆಲ್ಲರೂ ಗೋ ಪೂಜಕರಾಗಿದ್ದರು. ಅವರು ಯಾರೂ ಗೋಮಾಂಸವನ್ನು ತಿನ್ನುತ್ತಿರಲಿಲ್ಲ. ಬ್ರಿಟಿಷರು ಈ ದೇಶದಲ್ಲಿ ಕಸಾಯಿಖಾನೆಗಳ ಸ್ಥಾಪನೆ ಮಾಡಿದರು. ರಾಬರ್ಟ್ ಕ್ಲೈವ್‌ನ ಮಾನಸ ಪುತ್ರರು ಇಂದಿಗೂ ಇದ್ದಾರೆ. ಅವರಿಂದಾಗಿ ಗೋಹತ್ಯೆ ಇಂದಿಗೂ ನಡೆಯುತ್ತದೆ. ಇದು ದೇಶದ ದೌರ್ಭಾಗ್ಯ. ಗೋವು ಆತ್ಮ ಸಾಕ್ಷಾತ್ಕಾರಕ್ಕೆ ಸಾಧನ. ಜೀವಾಧಿಕಾರ ಪ್ರತಿ ಪ್ರಾಣಿಗೂ ಇದೆ. ಅದರ ರಕ್ಷಣೆಯಾಗಬೇಕು. ಗೋಮಾಂಸ ರಫ್ತಿನಿಂದ ಪರ್ಯಾವರಣಕ್ಕಾಗಿ ನಷ್ಟವನ್ನು ಲೆಕ್ಕಕ್ಕೆ ತೆಗೆದುಕೊಂಡಲ್ಲಿ ಅಂದಾಜು 10 ರಿಂದ 12 ಲಕ್ಷ ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆಯೆಂದು ಸಾಧಾರ ಹೇಳಿದರು. ಗೋವಂಶ ನಾಶದಿಂದಾಗಿ ಇಂದು ಹಲವು ರೋಗಗಳ ತೀವ್ರ ವೃದ್ಧಿಯಾಗುತ್ತಿದೆ. ತಾವು ತಮ್ಮಲ್ಲಿಗೆ ಬರುವ ಎಲ್ಲ ರೋಗಿಗಳಿಗೆ ನಿತ್ಯ ಗೋಮೂತ್ರ ಸೇವನೆಯ ಸಲಹೆಯನ್ನು ಕೊಡುತ್ತಿರುವುದಾಗಿ ತಿಳಿಸಿದರು.



ಯಾತ್ರೆಯ ಉದ್ದೇಶ ಪೂರ್ತಿಗಾಗಿ ಈ ಸಂಘರ್ಷ ಜಾರಿಯಲ್ಲಿರಬೇಕು. ಇದಕ್ಕೆ ಸಂತರಾದ ನಾವೆಲ್ಲರೂ ಬದ್ಧರು. ಗೋ ಸಂವರ್ಧನೆಗೆ ಸರಕಾರದಿಂದ ಪ್ರೋತ್ಸಾಹ ಧನ ಸಿಗಬೇಕು. ಗೋಜನ್ಯ ಆಹಾರ ಪದಾರ್ಥಗಳಿಗೆ ಪ್ರೋತ್ಸಾಹ ಬೇಕು. ಎಲ್ಲ ಕಡೆ ರೂ. 10ಕ್ಕೆ ಒಂದು ಲೀಟರ್ ಗೋಮೂತ್ರವನ್ನು ರೈತನಿಂದ ಖರೀದಿಸುವಂತಾಗಬೇಕು ಮತ್ತು ತಮ್ಮ ತಮ್ಮ ಆತ್ಮೋದ್ಧಾರಕ್ಕೆ ಗೋ ಆಧಾರಿತ ಔಷಧಿಗಳನ್ನು ಬಳಸಬೇಕು ಎಂಬ ಅಮೂಲ್ಯ ಸಲಹೆಯನ್ನಿತ್ತರು. ಗೋ ಸಂರಕ್ಷಣೆಗಾಗಿ ತಮ್ಮ ಪ್ರಾಣಾರ್ಪಣೆಗೂ ಸಿದ್ಧ ಎಂದರು.



ಶ್ರೀ ಶಂಕರಲಾಲಜೀ ಇಡೀ ಯಾತ್ರೆಯ ಉದ್ದೇಶ ಹಾಗೂ ನಡೆದು ಬಂದ ರೀತಿಯನ್ನು ವಿವರಿಸಿದರು.

ಕರವೀರಪೀಠದ ಶಂಕರಾಚಾರ್ಯ ಶ್ರೀ ನೃಸಿಂಹ ಸರಸ್ವತೀಜೀ ಅವರು ಟ್ರಾಕ್ಟರಿನಿಂದ ನಮ್ಮ ರೈತರು ದೂರವಿದ್ದಾಗ ಮಾತ್ರ ಎತ್ತುಗಳ ಪಾಲನೆ ಮತ್ತು ಅಭಿವೃದ್ಧಿ ಸಾಧ್ಯವೆಂದರು. ನಿತ್ಯ ಗೋಗ್ರಾಸ ನೀಡಿದರೆ ರೋಗಗಳಿಂದ ಮುಕ್ತವಾಗಬಹುದು ಎಂದರು.

ಛತ್ತೀಸಗಢದ ಶ್ರೀ ಬಶೀರ್ ಖಾದ್ರಿ ಅವರು ಛತ್ತೀಸಗಢದಲ್ಲಿ ಒಂದೂ ಗೋಹತ್ಯೆ ನಡೆಯುತ್ತಿಲ್ಲವೆಂದು ಹೆಮ್ಮೆಯಿಂದ ಹೇಳಿದರು. ಹಿಂದೂಗಳ ಭಾವನೆಯನ್ನು ಗೌರವಿಸಿ, ಎಲ್ಲರಿಗೂ ಹಾಲು ನೀಡುವ ಗೋಮಾತೆಯ ರಕ್ಷಣೆಯಾಗಬೇಕು, ಅದಕ್ಕಾಗಿ ಮುಸ್ಲಿಂಮರ ಹಸ್ತಾಕ್ಷರ ಬೇಕಾದಲ್ಲಿ ಕೋಟಿಗಟ್ಟಲೆ ಹಸ್ತಾಕ್ಷರ ಕೊಡಿಸುತ್ತೇನೆಂದು ಘಂಟಾಘೋಷ ಮಾಡಿದರು.

ಬೌದ್ಧ ಧರ್ಮದ ರಾಹುಲ್ ಬೋಧಿ ಜೀ ಗೋಹತ್ಯಾ ವಿರೋಧವನ್ನು ಸಂಪೂರ್ಣವಾಗಿ ಸಮರ್ಥಿಸುತ್ತೇವೆಂದರು.



ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಾನನೀಯ ಸರಸಂಘಚಾಲಕ ಶ್ರೀ ಮೋಹನ ಭಾಗವತ್ ಅವರು ಗ್ರಾಮಾಧಾರಿತ ವಿಕಾಸ ಸರಿಯಾದ ದಾರಿ ಎಂಬುದು ಈಗಿನ ಸಿದ್ಧಾಂತವಾಗಿದೆ. ವಿಕೇಂದ್ರೀಕರಣದ ಉತ್ತಮ ಉದಾಹರಣೆ ಗ್ರಾಮ ಜೀವನ ಎಂದರು. ಗ್ರಾಮದಲ್ಲಿ ಬಂಧುತ್ವ ಇದೆ. ಪಟ್ಟಣ ಬೆಳೆದಂತೆ ಮನುಷ್ಯ-ಮನುಷ್ಯನ ಸಂಬಂಧಗಳು ದೂರಾಗುತ್ತವೆ ಎಂದರು. ಭಾರತದ ಗೀರ್ ತಳಿಯನ್ನು ಬ್ರೆಜಿಲ್ ದೇಶ ವರ್ಧಿಸಿ ಅತ್ಯುತ್ತಮ ಫಲಿತಾಂಶ ತೆಗೆದುಕೊಳ್ಳುತ್ತಿದೆ. ಆದರೆ ನಾವೀಗ ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಪ್ರಕೃತಿಯ ಸಂರಕ್ಷಣೆ, ಗೋಮಯ, ಗೋಮೂತ್ರ, ವ್ಯವಸಾಯದಿಂದ ಸಾಧ್ಯ ಎಂದು ನುಡಿದರು. ನಮ್ಮ ವಿಶಿಷ್ಟ ಪರಂಪರೆಯನ್ನು ರಕ್ಷಿಸಬೇಕು ಎಂದು ಜನತೆಯನ್ನು ಆಗ್ರಹಿಸಿದರು.

ಇಸ್ಕಾನಿನ ಶ್ರೀ ಸಹದೇವ ದಾಸ್‌ಜೀ ಮಹಾರಾಜ್, ನಾಮಧಾರಿ ಶ್ರೀ ಹರಪಾಲ್ ಸಿಂಗ್‌ಜೀ, ಬೌದ್ಧ ಗುರು ಭಂತೇ ಜ್ಞಾನ ಜಗತ್‌ಜೀ ಮಹಾರಾಜ್, ಇವರುಗಳು ಗೋರಕ್ಷಣೆಯ ಪರವಾಗಿ ತಮ್ಮ ವಿಚಾರಗಳನ್ನು ಶ್ರುತಪಡಿಸಿದರು.

ರಾಷ್ಟ್ರ ಸೇವಿಕಾ ಸಂಘದ ಪ್ರಮುಖ ಸಂಚಾಲಕಿ ಪ್ರಮೀಳಾ ತಾಯಿ ಮೇಢೆ ಅವರು ಗೋ ಸಂರಕ್ಷಣೆ ಕಾನೂನಿನಿಂದ ಸಾಧ್ಯವಿಲ್ಲ. ಜನರು ಗೋವಿನ ಬಗ್ಗೆ ಭಾವನೆ ಬೆಳೆಸಿಕೊಂಡು ಗೋವಿನ ಸಮ್ಮಾನ ಮಾಡಬೇಕೆಂದರು.

ಮುಸ್ಲಿಂ ರಾಷ್ಟ್ರೀಯ ವಿಚಾರ ಮಂಚದ ಶ್ರೀ ತಯ್ಯರ್ ಖುರೇಷಿ ಅವರು, ತಾವು ಗೋಹತ್ಯಾ ವಿರೋಧೀ ಮುಸ್ಲಿಂ ಸಂಘರ್ಷ ಸಮಿತಿಯನ್ನು ಕಳೆದ 6 ವರ್ಷಗಳಿಂದ ಮುನ್ನಡೆಸುತ್ತಿದ್ದು, ಮುಸ್ಲಿಂಮರು ಬಹುಸಂಖ್ಯಾತರೊಡನೆ ಪ್ರೀತಿ-ಪ್ರೇಮ-ವಿಶ್ವಾಸಗಳಿರಲು ಗೋ ಸಂರಕ್ಷಣೆ ಅತ್ಯಗತ್ಯ ಎಂಬ ವಿಚಾರವನ್ನು ಪ್ರಸಾರ ಮಾಡುತ್ತಿರುವುದಾಗಿ ಹೇಳಿದರು. ಶಹಬಾನೋ ಖಟ್ಲೆಯಲ್ಲಿ ಸರಕಾರ ಸಂವಿಧಾನವನ್ನು ತಿದ್ದುಪಡಿ ಮಾಡಲು ಸಾಧ್ಯವಾದರೆ ಗೋಹತ್ಯೆ ಬಗ್ಗೆ ಸಂವಿಧಾನಾತ್ಮಕ ಬದಲಾವಣೆ ಏಕೆ ತರಬಾರದು ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ಯಾತ್ರೆಯನ್ನು 71 ನಗರಗಳಲ್ಲಿ ಮುಸ್ಲಿಂಮರು ಸ್ವಾಗತಿಸಿದ್ದಾರೆ ಹಾಗೂ 5 ಲಕ್ಷ ಹಸ್ತಾಕ್ಷರ ನೀಡಿದ್ದಾರೆಂದು ಹೇಳಿದ ಅವರು ಗೋ ಸಂರಕ್ಷಣೆಗಾಗಿ ತಮ್ಮ ಪ್ರಾಣ ಮುಡಿಪು ಎಂದು ಘೋಷಿಸಿದರು.

ಯಾತ್ರಾ ರಾಷ್ಟ್ರೀಯ ಪ್ರವರ್ತಕರುಗಳಾದ ಮಾತಾ ಅಮೃತಾನಂದಮಯೀ ದೇವಿ ಅಮ್ಮ ಮತ್ತು ಶ್ರೀ ರವಿಶಂಕರ ಗುರೂಜಿ ಇವರ ಪರವಾಗಿ ಅವರ ಸಂದೇಶಗಳನ್ನು ಶ್ರುತಪಡಿಸಲಾಯಿತು.



ಕೊನೆಯಲ್ಲಿ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ದಿವ್ಯ ಸಂಕಲ್ಪ ಕರ್ತರಾದ ಪ.ಪೂ. ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಗೋಮಾತೆಯನ್ನು ಭಾವಪೂರಿತವಾಗಿ ವಂದಿಸಿ, ನಾಗಪುರದ ಬಗ್ಗೆ ಪ್ರಶಂಸೆಯ ನುಡಿ ನಮನಗಳನ್ನು ಸಲ್ಲಿಸಿದರು. ಭಾರತದ ಪ್ರಾಣವಾದ ಗೋಮಾತೆಯ ಪ್ರಾಣವನ್ನುಳಿಸಲು ನಮ್ಮ ಪ್ರಾಣವನ್ನು ಸಮರ್ಪಣೆ ಮಾಡುವ ಪಣ ತೊಡಿ ಎಂದು ಹೇಳಿ ಗೋ ರಕ್ಷಣೆಯ ಸಂಕಲ್ಪ ಬೋಧಿಸಿದರು.

ಸಭೆಯಲ್ಲಿ ಅಂದಾಜು 40,000 ಜನ ಭಾಗವಹಿಸಿದರು. ಸಮಾರೋಪ ಕಾರ್ಯಕ್ರಮದ ಅಂಗವಾಗಿ ಗೋವಿನ ಬಗ್ಗೆ ಸಮಗ್ರ ಮಾಹಿತಿ ನೀಡುವ ಪ್ರದರ್ಶಿನಿಯನ್ನು ಆಯೋಜಿಸಲಾಗಿತ್ತು. ಇದು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

ಕೌವ್‌ಗಳ ಥಳಕು ಬಳಕು ನಡೆ!

# ದನಗಳ ಸೌಂದರ್ಯ ಸ್ಪರ್ಧೆ

**ಇಸ್ಕಾನ್ ಮತ್ತು ರೇಡಿಯೋ ಮಿರ್ಚಿ ಜೊತೆ ಸೇರಿ ಸಂಕ್ರಾಂತಿಯಂದು ದನಗಳ ಫ್ಯಾಶನ್ ಶೋ ಏರ್ಪಡಿಸಿದ್ದರು. ಗೋ ವಿಶ್ವ ಪತ್ರಿಕೆಯ ಸಂಪಾದಕರು ತೀರ್ಪುಗಾರರಲ್ಲಿ ಒಬ್ಬರಾಗಿದ್ದರು.**

ವೇದಿಕೆ ಮೇಲೆ ಫ್ಯಾಷನ್ ಶೋಗೆ ಥಳಕುತ್ತ ಬಳಕುತ್ತ ವಿವಿಧ ಮಾದರಿಯಲ್ಲಿ ಸಿಂಗರಿಸಿಕೊಂಡು ಮೆಲ್ಲ ಮೆಲ್ಲ ಹೆಜ್ಜೆ ಇಡುತ್ತ ಸಾಗಿದರೆ, ಪುಳಕಿತಗೊಂಡ ನೋಡುಗ ವೃಂದದ, ಪ್ರೋತ್ಸಾಹದ ಶಿಳ್ಳೆ–ಚಪ್ಪಾಳೆಗಳು ಮುಟ್ಟಿದ್ದು ಆಗಸಕ್ಕೆ!

ಇದೇನು, ಎಲ್ಲಾ ಫ್ಯಾಷನ್ ಶೋಗಳಲ್ಲು ಹೀಗೆ ನಲ್ಲೆಯರಿಗೆ ಮನಸೋತು ಪುಳಕಿತಗೊಳ್ಳುವುದು ಸಾಮಾನ್ಯ ಎನ್ನಬೇಡಿ. ಈ ಫ್ಯಾಷನ್ ಶೋ ನಡೆದಿದ್ದು ಕೇವಲ ಗೋವುಳಿಗೆ ಮಾತ್ರ!



ಭಾರತೀಯ ಜೀವನಾಡಿಯಲ್ಲಿ ಹಾಸುಹೊಕ್ಕಾಗಿರುವ ಗೋವುಗಳಿಗೆ ಪವಿತ್ರ ಸ್ಥಾನ. ಇಂಥ ಗೋವುಗಳಿಗೆ ಮಾಡರ್ನ್ ಟಚ್ ನೀಡಿ ಸಂಕ್ರಾಂತಿಯಂದು ಸುಂದರ ಸಂಜೆಯ "ಫ್ಯಾಷನ್ ಶೋ" ಗೆ ವೇದಿಕೆ ಮಾಡಿಕೊಟ್ಟಿದ್ದು ಇಸ್ಕಾನ್ ಮತ್ತು ರೇಡಿಯೊ ಮಿರ್ಚಿ.

ಬೆಣ್ಣೆ ಪ್ರಿಯ ಕೃಷ್ಣನ ಸನ್ನಿಧಿಯಲ್ಲಿ ಕಾರ್ಯಕ್ರಮಕ್ಕೆ "ಕೊಂಬು ಮೇಳ" ಎಂಬ ಹೆಸರಿಟ್ಟು ಗೋವುಗಳಿಗೆ ಶೃಂಗಾರದ ಜೊತೆ ವೈಯಾರದ ನಡುಗೆ, ಸ್ಪರ್ಧಿಗಳು ಮಾಡಿದ್ದ ವಿವಿಧ ಅಲಂಕಾರ ಕಿಕ್ಕಿರಿದು ತುಂಬಿದ್ದ ಸಭಾಂಗಣಕ್ಕೆ ಮನೋರಂಜನೆಯ ಜೊತೆ ಗೋವುಗಳ ಮಹತ್ವ ಸಾರಿತು.




ಬೆಂಗಳೂರಿನ ಮನೆಗಳಲ್ಲಿ ಗೋವುಗಳಿಲ್ಲದಿದ್ದರೂ, ಇಸ್ಕಾನ್‌ನ ಗೋಶಾಲೆಯಲ್ಲಿನ ಗೋವುಗಳೊಂದಿಗೆ ಸ್ನೇಹ ಬೆಳೆಸಿ ಅದಕ್ಕೆ ಸೀರೆ, ಪಂಚೆಯ ವಿವಿಧ ಅಲಂಕಾರ. ಇದರ ಜೊತೆಗೆ ನಾವು ಕಂಡ ಕಂಡಲ್ಲಿ ಪ್ಲಾಸ್ಟಿಕ್ ಬಿಸಾಕುವುದರಿಂದ ಗೋವುಗಳು ಅದನ್ನು ತಿಂದು ತೊಂದರೆಗೀಡಾಗುವ ಮುಂತಾದ ಸಂದೇಶವನ್ನು ಕೂಡ ನೀಡಿದ್ದು ವಿಧ್ಯಾರ್ಥಿಗಳಲ್ಲಿನ ಗೋವುಗಳ ಬಗ್ಗೆಯ ನೈಜ ಕಾಳಜಿಯ ಧ್ಯೋತಕವಾಗಿತ್ತು.

ಸತತ ನಾಲ್ಕನೇ ವರ್ಷ "ಇಸ್ಕಾನ್ ಮತ್ತು ರೆಡಿಯೋ ಮಿರ್ಚಿ" ಸಹಭಾಗಿತ್ವದಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮಕ್ಕೆ ವಿದೇಶಿಯರೂ ಕೂಡ ಆಕರ್ಷಿತರಾಗಿ ಬಂದು ಸಂಭ್ರಮಿಸಿದ್ದು ವಿಶೇಷ.

ವೋಗ್ ಫ್ಯಾಶನ್ ಇನ್‌ಸ್ಟಿಟ್ಯೂಟ್, ಸುರಾನಾ ಕಾಲೇಜು ಫ್ಯಾಶನ್ ವಿಭಾಗ, ಕೆ.ಎಲ್.ಇ. ಕಾಲೇಜು, ಶೇಷಾದ್ರಿಪುರಂ ಕಾಲೇಜು, ಸಿಟಿ ಕಾಲೇಜು, ಪ್ರಸಿಡೆನ್ಸಿ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಒಟ್ಟು ಹತ್ತು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅವರು ಹಸುಗಳಿಗೆ ಶೃಂಗಾರ ಮಾಡಿ ವೇದಿಕೆಗೆ ಕರೆತಂದರು. ಪ್ರತಿ ಸ್ಪರ್ಧಾಳುಗಳೊಂದಿಗೆ ರೇಡಿಯೊ ಮಿರ್ಚಿಯ ಆರ್.ಜೆ.ಗಳು ಹೆಜ್ಜೆ ಹಾಕಿ ತಮ್ಮ ಅನಿಸಿಕೆ ಹಂಚಿಕೊಂಡರು.




ಹಿರಿಯ ನಟ ಮಾಸ್ಟರ್ ಹಿರಣ್ಣಯ್ಯ, ಬೆಂಗಳೂರು ಇಸ್ಕಾನ್‌ನ ಉಪಾಧ್ಯಕ್ಷ ಚಂಚಲಾಪತಿದಾಸ, ರೇಡಿಯೋ ಮಿರ್ಚಿಯ ಕರ್ನಾಟಕ ಮುಖ್ಯಸ್ಥ ರಾಹುಲ್ ಬಲ್ಯಾನ್, ಗೋವಿಶ್ವ ಪತ್ರಿಕೆಯ ಸಂಪಾದಕ ಡಾ. ಯು. ಬಿ. ಪವನಜ ಉಪಸ್ಥಿತರಿದ್ದರು. ಮಾಸ್ಟರ್ ಹಿರಣ್ಣಯ್ಯ ಒಂದು ಗೋದಾನವನ್ನು ಮಾಡಿದರು.

ಲಾಸ್ಟ್ ನಲ್ಲಿ ಕೇಳಿಸಿದ್ದು: ಕೊಂಬು ಮೇಳದಲ್ಲಿ ದೇಶೀಯ ಗೋತಳಿಗಳಿದ್ದರೆ ಕಾರ್ಯಕ್ರಮಕ್ಕೆ ಇನ್ನೂ ಇಂಬು ಬರುತ್ತಿತ್ತು.

**– ನಿತಿನ್ ಮುತ್ತಿಗೆ**